ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಉತ್ತರ ಕೊಡುತ್ತೇನೆ. ನಾನು ಕೊಡುವ ಉತ್ತರ ಸಮಾಧಾನವಾಗದಿದ್ದರೆ ನಾಳೆ ದಿವಸ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ನೀವು ಕೊಡುವ ಉತ್ತರವೇ ನಿಮಗೆ ಸಮಾಧಾನ ಇಲ್ಲದೆ ಇರುವುದರಿಂದ ನಾಳೆ ದಿವಸ ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಸುರೇಶ್ ಕುಮಾರ್ : ನಾನು ಇನ್ನು ಉತ್ತರವೆ ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಹೇಳುವ ರೀತಿಯಲ್ಲಿಯೇ ಸಮಾಧಾನ ಕಾಣುತ್ತಿಲ್ಲ.

ಶ್ರೀ ಸುರೇಶ್ ಕುಮಾರ್ : ನಿಮ್ಮ ಯಾರ್ಡ್‌ಸ್ಟಿಕ್ ನನಗೆ ಗೊತ್ತಿದೆ. ಆದ್ದರಿಂದ, ನಾನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹೌದು. Very good. ನೀವೊಬ್ಬರೆ ಈ ರೀತಿಯಾಗಿ ನನ್ನ ಬಗ್ಗೆ ಅರ್ಥ ಮಾಡಿಕೊಂಡಿರುವುದು.

ವಿಷಯ:– ಕಾಡಾನೆ ಹಾವಳಿಯನ್ನು ತಡೆಗಟ್ಟುವುದು ಮತ್ತು ಮೃತರ ಕುಟುಂಬಕ್ಕೆ ಪರಿಹಾರವನ್ನು ಹೆಚ್ಚಿಸುವ ಬಗ್ಗೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಕಾಡಾನೆ ಹಾವಳಿಯ ಬಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. ನಿನ್ನೆದಿವಸ ನನ್ನ ಕ್ಷೇತ್ರವಾದ ಸೋಮವಾರಪೇಟೆ ತಾಲ್ಲೂಕಿನಲ್ಲಿ ಕಾಡಾನೆ ತುಳಿತದಿಂದ ಇಬ್ಬರು ಮೃತಪಟ್ಟಿದ್ದಾರೆ. ಕಾಡಾನೆ ತುಳಿತದಿಂದ ಮೃತಪಟ್ಟವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಮಾತ್ರ ಕೊಡುವಂಥ ಪರಿಸ್ಥಿತಿಯಾಗಿದೆ. ನಾನು 1995ರಲ್ಲಿ ವಿಧಾನಸಭೆಯಲ್ಲಿದ್ದಂಥ ಸಂದರ್ಭದಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದರು. ಆಗ ಮೃತ ಕುಟುಂಬಕ್ಕೆ ಕೇವಲ 25 ಸಾವಿರ ರೂಪಾಯಿಗಳನ್ನು ಮಾತ್ರ ಕೊಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ ಅದನ್ನು 50 ಸಾವಿರ ರೂಪಾಯಿಗೆ ಏರಿಸಿದರು. ಅದಾದನಂತರ ಸನ್ಮಾನ್ಯ ಜೆ.ಹೆಚ್.ಪಟೇಲರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅದನ್ನು ಒಂದು ಲಕ್ಷ ರೂಪಾಯಿಗೆ ಏರಿಸತಕ್ಕಂಥ ಕೆಲಸವನ್ನು ಮಾಡಿದರು. ಇವತ್ತಿನ ದಿವಸ ಕಾಡಾನೆ ಹಾವಳಿಯಿಂದ ಜನ ಸತ್ತರೆ ಅದಕ್ಕೆ ಬೆಲೆ ಇಲ್ಲದಂಥ ಪರಿಸ್ಥಿತಿಯಾಗಿದೆ. ಆ ಕಾಡಾನೆ ಹಾವಳಿಯನ್ನು ಸಮಗ್ರವಾಗಿ ತಡೆಗಟ್ಟುವುದಕ್ಕೋಸ್ಕರ ಒಂದು ಚರ್ಚೆ ಕೂಡ ಆಗಬೇಕಾಗಿದೆ. ಸನ್ಮಾನ್ಯ ಅಧ್ಯಕ್ಷರ

ಕ್ಷೇತ್ರದಲ್ಲಿಯೂ ಕೂಡ ಇದೇ ತೊಂದರೆ ಆಗಿದೆ. 15 ದಿವಸಕ್ಕೊಂದು ಸಾರಿ ಅಥವಾ ಪ್ರತಿ ತಿಂಗಳಿಗೊಂದು ಸಾರಿ ಕಾಡಾನೆ ತುಳಿತದಲ್ಲಿ ಸಾಯುವವರ ಸಂಖ್ಯೆ ಹೆಚ್ಚಾಗಿದ್ದು, ಜನರ ಜೀವಕ್ಕೆ ಬೆಲೆ ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ, ಕಾಡಾನೆ ಹಾವಳಿಯನ್ನು ತಡೆಯುವುದರ ಜೊತೆಗೆ ಜನರ ಜೀವವನ್ನು ಉಳಿಸುವಂಥ ಕೆಲಸ ಆಗಬೇಕು. ಅದರ ಜೊತೆಗೆ ಕಾಡಾನೆ ತುಳಿತದಿಂದ ಸತ್ತ ಕುಟುಂಬದವರಿಗೆ 3 ಲಕ್ಷ ರೂಪಾಯಿ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಕಾಡಾನೆ ಮತ್ತು ಕಾಡು ಪ್ರಾಣಿಗಳಿಂದ ಒಂದು ಕಡೆ ರೈತ ಬೆಳೆದಂಥ ಬೆಳೆ ನಾಶವಾಗುತ್ತಿದೆ ಮತ್ತೊಂದು ಕಡೆ ಕಾಡಾನೆ ಹಾವಳಿಯಿಂದ ಸಾವನ್ನಪ್ಪುವಂಥದು ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಮೊನ್ನೆ ದಿವಸ ಅರಣ್ಯ ಇಲಾಖೆ ಬಗ್ಗೆ ರಿವ್ಯೂ ಮಾಡುವಂಥ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚಿಸುವಾಗ ಕಾಡಾನೆಗಳು ಕಾಡು ಬಿಟ್ಟು ಊರುಗಳಿಗೆ ಬಂದು ಊರಿನಲ್ಲಿಯೇ ಓಡಾಡುವಂಥ ದುಸ್ಥಿತಿ ಬಂದಿದ್ದು, ಇದನ್ನು ತಡೆಯುವುದಕ್ಕೆ ಏನೇನು ವಿಶೇಷವಾದಂಥ ಕ್ರಮಗಳನ್ನು ಕೈಗೊಳ್ಳಬೇಕಾಗಿದೆಯೋ ಅವೆಲ್ಲವನ್ನು ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದೇನೆ. ಮತ್ತೆ ಅದಕ್ಕೆ ಅಗತ್ಯವಿರುವ ಮೇವು ಕಾಡಿನಲ್ಲಿಯೇ ಸಿಗುವುದಕ್ಕೆ ಬೇಕಾಗಿರುವಂಥ ವ್ಯವಸ್ಥೆಯ ಬಗ್ಗೆ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ. ಒಟ್ಟಾರೆ ರೈತನ ಬೆಳೆ ಉಳಿಸುವುದರ ಜೊತೆಗೆ ರೈತನ ಪ್ರಾಣ ಕೂಡ ಉಳಿಸಬೇಕಾಗಿದೆ. ಕಾಡಾನೆ ತುಳಿತದಿಂದ ಮೃತಪಟ್ಟವರ ಕುಟುಂಬಕ್ಕೆ ತತ್‌ಕ್ಷಣ ಎರಡು ಲಕ್ಷ ರೂಪಾಯಿ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಈ ಬಗ್ಗೆ ಇನ್ನು ಒಂದು ವಾರದಲ್ಲಿ ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತೇನೆಂಬ ಭರವಸೆಯನ್ನು ಈ ಸದನದಲ್ಲಿ ನಾನು ಕೊಡುತ್ತೇನೆ.

ಶ್ರೀ ಅಪ್ಪಚ್ಚುರಂಜನ್:– ಕಾಡಾನೆ ತುಳಿತದಿಂದ ಮೃತಪಟ್ಟ ಕುಟುಂಬಕ್ಕೆ ನೀಡುವ ಪರಿಹಾರವನ್ನು 2 ಲಕ್ಷ ರೂಪಾಯಿಗೆ ಏರಿಸುವುದಕ್ಕಾಗಿ ತೀರ್ಮಾನ ತೆಗೆದುಕೊಂಡ ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ನಿಯಮ 69ರ ಮೇಲೆ ಚರ್ಚೆ

ವಿಷಯ: ಸನ್ಮಾನ್ಯ ಲೋಕಾಯುಕ್ತರಾದ ಶ್ರೀ ಸಂತೋಷ್ ಹೆಗಡೆಯವರ ರಾಜೀನಾಮೆ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ರೂಲಿಂಗ್